

# ಷೂಟಿಂಗ್‌ಗೆ ಅನುಮತಿ ಸಿಕ್ಕಿದೆ

ಈ ವಾರ ನಮ್ಮೊಂದಿಗೆ

## ಸುಷ್ಮಾ

### ಲಕುಮಿ ಪಾತ್ರಧಾರಿ

▶ ಏನಮ್ಮಾ, ಏನು ಓದ್ತಾ ಇದೀಯ?
9ನೇ ತರಗತಿ ಅಂಕಲ್. ಬೆಂಗಳೂರಿನ ಜಯನಗರ 5ನೇ ಬ್ಲಾಕ್‌ನ ಗುಡ್ ಶೆಫರ್ಡ್ ಶಾಲೆಯಲ್ಲಿ.

▶ ಶಾಲೆ ಶುರುವಾಗಿದೆಯಲ್ಲ...
ಹೌದು, ಶುರುವಾಗಿದೆ. ಷೂಟಿಂಗ್‌ನಲ್ಲಿ ಭಾಗವಹಿಸೋದಕ್ಕೆ ಈಗ 10ದಿನಕ್ಕೆ ಶಾಲೆಯವರು ಅನುಮತಿ ಕೊಟ್ಟಿದ್ದಾರೆ.

▶ ಇಲ್ಲಿಗೆ ಮುಗಿದು ಹೋಗಲ್ಲ ಅಲ್ವಾ... ಮತ್ತೆ ಷೂಟಿಂಗ್ ಬಂದಾಗ ಹೇಗೆ ಮಾಡ್ತಿಯಾ?
ಯಾವಾಗ ಷೂಟಿಂಗ್ ಇರುತ್ತೋ ಆವಾಗ ರಜೆ ಕೊಡೋಕೆ ಶಾಲೆಯವರು ಒಪ್ಪಿದ್ದಾರೆ.

▶ ಸರಿ, ಅನುಮತಿ ಸಿಗಬಹುದು. ಆದರೆ ಪಾಠ ತಪ್ಪಿಸಿಕೊಳ್ತೀಯಲ್ಲ?
ಟೀಚರ್ ಮನೆಗೆ ಹೋದರೆ ಹೇಳಿಕೊಡ್ತಾರೆ.

▶ ಆಗ ಶಾಲೆಗೂ ಹೋಗ್ತಾ, ಟೀಚರ್ ಮನೆಗೂ ಹೋಗ್ತಾ ಹೇಗೆ ಸಮಯ ಹೊಂದಿಸಿಕೋತಿಯಾ?
ಒಂದು ಸಲ ಹೇಳಿಕೊಟ್ಟರೆ ಸಾಕು ಅಂಕಲ್, ನಾನು ಕಲೀತೀನಿ. ಅಕ್ಕನೂ ಹಲವಾರು ಧಾರಾವಾಹಿಗಳಲ್ಲಿ, ಸಿನಿಮಾಗಳಲ್ಲಿ ನಟಿಸ್ತಾಳೆ. ಅವಳಿಗೂ ಸಾಕಷ್ಟು ಷೂಟಿಂಗ್ ಇರುತ್ತೆ. ಇದರ ಮಧ್ಯೆ ಓದೋದನ್ನೂ ನಿಲ್ಲಿಸಿಲ್ಲ. ಜೈನ್ ಕಾಲೇಜಿನಲ್ಲಿ ಬಿಸಿಎ ಪದವಿಗೆ ಈ ವರ್ಷ ಸೇರಿದ್ದಾಳೆ.

▶ ಯಾರು ಆಕೆ?
ಸುಮಾ ಅಂತ ಅಂಕಲ್. ಮುಕ್ತ ಮುಕ್ತದಲ್ಲಿ ವೈದೇಹಿ ಪಾತ್ರ ಮಾಡಿದ್ದಾಳೆ.

▶ ಪರವಾ ಇಲ್ಲ, ಒಂದೇ ಮನೆಯಲ್ಲಿ ಇಬ್ಬರು ಹೆಸರಾಂತ ಬಾಲನಟಿಯರು!
ಆ ಹೌದು. ಖುಷಿಯಾಗ್ತದೆ. ಅಕ್ಕನ ಜತೆ ಹೋಗ್ತಾ ನಾನೂ ಕಲಿತುಕೊಂಡೆ.

▶ ಇಷ್ಟು ಚಿಕ್ಕ ವಯಸ್ಸಿಗೇ ಟೈಟಲ್ ರೋಲ್ ಲಕುಮಿಯಂತಹ ದೊಡ್ಡ ಪಾತ್ರ ಹೇಗನಿಸುತ್ತೆ? ಹೇಗೆ ಮಾಡ್ತಿಯಾ?
ಖುಷಿ ಆಗ್ತಾ ಇದೆ. ನಿರ್ದೇಶಕ ರಮೇಶಕೃಷ್ಣ ಎಲ್ಲ ಹೇಳಿಕೊಡ್ತಾರೆ. ತಾಯಿ ಪಾತ್ರ ಮಾಡಿರೋ ಅಪೂರ್ವ ಆಂಟಿ ಪ್ರೋತ್ಸಾಹ ಕೊಡ್ತಾರೆ. ಅವರಂತೂ ನನಗೆ ರೋಲ್ ಮಾಡೆಲ್ ಇದ್ದ ಹಾಗೆ.

▶ ಒಂದೇ ಮನೆಯಲ್ಲಿ ಅಕ್ಕ- ತಂಗಿ ಇಬ್ಬರೂ ಅಭಿನಯಿಸೋಕೆ ಅಪ್ಪ- ಅಮ್ಮ ಬೆಂಬಲಿಸ್ತಾರಾ?
ಇಲ್ಲೇ ಇದ್ದಾರೆ ನೋಡಿ ಅಂಕಲ್. ಅವರ ಹತ್ರ ಮಾತಾಡಿ.

▶ ಸುಷ್ಮಾನ ತಾಯಿ ನೀವು. ನಿಮ್ಮ ಮಕ್ಕಳಿಗೆ ಓದೋದು ಬಿಟ್ಟು ಅಭಿನಯಕ್ಕೆ ತೊಡಗಿಸಿದ್ದೀರಾ?
ಅದೊಂದು ಆಕಸ್ಮಿಕ ಸಾರ್. ನಮ್ಮ ಇಬ್ಬರೂ ಮಕ್ಕಳು ಅಭಿನಯದಲ್ಲಿ ತೊಡಗಿಸಿಕೊಂಡುಬಿಟ್ರು. ನಾನು ಭಾಗೀರಥಿ ಅಂತ, ನಮ್ಮ ಮನೆಯವರು ಶೇಖರ್. ಬಿಇಎಲ್‌ನಲ್ಲಿ ಕೆಲಸ ಮಾಡ್ತಾ ಇದ್ದಾರೆ.
ಓದೋದ್ರಲ್ಲೂ ಇಬ್ರೂ ಜಾಣರಿದ್ದಾರೆ. ಶೇ. 85ರಿಂದ 90ರ ವರೆಗೆ ಅಂಕ ಗಳಿಸ್ತಾರೆ. ಅಭಿನಯಿಸೋದರ ಜತೆಗೆ ಡ್ಯಾನ್ಸ್ ಕಲೀತಿದ್ದಾರೆ. ಕ್ರೀಡೆಗಳಲ್ಲಿ ಭಾಗವಹಿಸ್ತಾರೆ.

▶ ಇರೋ ಇಬ್ರು ಹೆಣ್ಣುಮಕ್ಕಳು ನಟನೆಗೆ ಹೋದದ್ದು ಹೇಗೆ? ನಿಮಗೆ ಈ ಹಿನ್ನೆಲೆ ಇತ್ತೆ?
ಇಲ್ಲ. ಅದೇ ಆಶ್ಚರ್ಯ. ಅನುರಾಗ ಧಾರಾವಾಹಿ ಮಾಡುವಾಗ ಬಾಲನಟಿ ಬೇಕಾಗಿದ್ದಳು. ಎಚ್.ವಿಶ್ವನಾಥ ಅನ್ನುವವರು ನನ್ನ ದೊಡ್ಡ ಮಗಳು ಸುಮಾಳನ್ನು ಪರಿಚಯಿಸಿದರು. ಅಲ್ಲಿಂದ ಶುರುವಾಯಿತು. ಮುಕ್ತ, ಪುಣ್ಯಕೋಟಿ, ಕವಲುದಾರಿ ಸೇರಿದಂತೆ 30 ಧಾರಾವಾಹಿಗಳಲ್ಲಿ ಮಾಡಿದಳು. ಅಜಯ್ ಸಿನಿಮಾದಲ್ಲಿ ಪುನೀತ್ ತಂಗಿ ಪಾತ್ರ ಮಾಡಿದಳು. ಇವಳು ಅಕ್ಕನ ಜತೆ ಹೋಗ್ತಾ ತಾನೇ ಕಲಿತುಕೊಂಡಳು. ಮಕ್ಕಳ ಲೋಕ ಇವಳ ಮೊದಲ ಧಾರಾವಾಹಿ. ಇವಳದೂ 20-25 ಧಾರಾವಾಹಿ ಆಯಿತು.

▶ ಮಕ್ಕಳ ಸಾಹಸದ ಬಗ್ಗೆ ನಿಮಗೆ ಹೇಗನಿಸುತ್ತೆ?
ಬಹಳ ಹೆಮ್ಮೆ ಅನಿಸುತ್ತೆ ಸಾರ್. ನಮಗೆ ಗಂಡು- ಹೆಣ್ಣು ಎಲ್ಲಾ ಅವರೇ. ಅವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಅನಿಸ್ತಾ ಇದೆ.

▶ ಶೇಖರ್ ಅವರೇ ನಿಮಗೆ ಹೇಗೆ ಅನಿಸುತ್ತೆ?
ಇದೆಲ್ಲಾ ತುಂಬಾ ಅನಿರೀಕ್ಷಿತ. ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸ್ತಾ ಇದ್ರು. ನಾವು ಪ್ರೋತ್ಸಾಹಿಸಿದೆವು. ಈಗ ಅವರು ದೊಡ್ಡ ನಟಿಯರಾಗೋದನ್ನ ಕಣ್ತುಂಬ ನೋಡ್ತಾ ಇದ್ದೇವೆ.

▶ ಮುಂದೆ ಅವರು ದೊಡ್ಡ ಹೀರೋಯಿನ್‌ಗಳಾಗಬಹುದೆ?
ಭಾಗೀರಥಿ: ಚಿತ್ರಗಳಿಂದ ಆಹ್ವಾನ ಬರ್ತಾ ಇದೆ. ಒಳ್ಳೆ ಕಥೆ, ಪಾತ್ರ ಬರಬಹುದೇನೋ ಅಂತ ಕಾಯ್ತೀವಿ.
ಸುಷ್ಮಾ: ನನಗೆ ಗೊತ್ತಿಲ್ಲ. ಅಪ್ಪ- ಅಮ್ಮ ಹೂಂ ಅಂದರೆ ಮಾಡ್ತೇನೆ. ಓದೋದಕ್ಕೆ ಏನೂ ತೊಂದರೆ ಮಾಡಿಕೊಳ್ಳದೇ ನಟಿಸ್ತೇನೆ.

■ ನಾಗು